ಬೆಂಗಳೂರು ಗಾಯನ ಸಮಾಜದ ಮಾಸ ಪತ್ರಿಕೆ

# ಗಾಯನ ಸಾಮ್ರಾಜ್ಯ

# GAYANA SAMRAJYA

Monthly Magazine of Bangalore Gayana Samaja

Volume: XLIII    Issue No.: 3    Pages : 4    JULY-2025    Rs : 2/-

# Programme for the Month of July 2025

## ಜುಲೈ ತಿಂಗಳ ಕಾರ್ಯಕ್ರಮ

## Date : Sunday, 20 July 2025

### SPONSORS

Smt. Sandhya Murthy Memorial Concert:
Kovoi R.Sama Rao Memorial endowment (1931-2008}:
Sri A.Ananthakrishnan Memorial Endowment :
Sri. A. Ratnamma Narasimiyengar and Sri. M.N Kesari Endowment :
ಶ್ರೀಮತಿ ಬಿ.ಎಸ್. ಇಂದಿರಮ್ಮ ಸಿಂಗಯ್ಯಂಗಾರ್ ಸ್ಮಾರಕ ದತ್ತಿ

### Vocal Concert

Vid.Lavanya Sundaraman ......... Vocal

(Great grand daughter of Vid D.K.Pattammal )

Vid Vishwajith M.V ......... Violin

Vid Renuka prasad ......... Mrudanga

Vid .Ramesh.R. ......... Ghata

ಎಲ್ಲರಿಗೂ ಆದರದ ಸುಸ್ವಾಗತ

### ಭಾವಪೂರ್ಣ ಶ್ರದ್ಧಾಂಜಲಿ

ಬೆಂಗಳೂರು ಗಾಯನ ಸಮಾಜದ ಟ್ರಸ್ಟಿನ ಟ್ರಸ್ಟಿಯಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ ಶ್ರೀ ಎಚ್ ಕೆ ನಂಜುಂಡಸ್ವಾಮಿ ಅವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸೋಣ.

–ಡಾ. ಎಮ್ ಆರ್ ವಿ ಪ್ರಸಾದ್

## ENDOWMENTS FOR THE MONTH OF JULY-2024

### Smt. Sandhya Murthy Memorial Concert:

Smt. Sandhya Murthy W/o well known Cinematographer Sri. V.K. Murthy was an ardent lover of classical music both Carnatic and Hindustani. To commemorate her memory Sri. Ashvini Pandit her brother, has created this Endowment.

---

### Kovoi R.Sama Rao Memorial endowment (1931-2008}:

He was an ardent lover of Carnatic Music and was organising Sri Thyagaraja and Sri Purandaradasa Aradhana at Coimbatore. He was also involved in many social activities. Sri C.S. Murali and Smt. M. Jayalakshmi has created this Endowment.

---

### Sri A.Ananthakrishnan Memorial Endowment :

He was a Member of The Bangalore Gayana Samaja for over Sixty years. He has served in various capacities as a member of Managing Committee and was also an ardent lover of Carnatic Classical music and was attending concerts regularly. His family has created this endowment for a concert in July every year.

---

### Sri. A. Ratnamma Narasimiyengar and Sri. M.N Kesari Endowment :

Smt. Ratnamma was a member of The Bangalore Gayana Samaja for over Fifty years. She passed away at the age of 88 years. Sri. M.N.Kesari S/o Smt. Ratnamma was also a member of The Bangalore Gayana Samaja for over 40 years and regularly attended the concerts. The Family members together have created this Endowment.

---

### ಶ್ರೀಮತಿ ಬಿ.ಎಸ್. ಇಂದಿರಮ್ಮ ಸಿಂಗಯ್ಯಂಗಾರ್ ಸ್ಮಾರಕ ದತ್ತಿ

ಶ್ರೀಸಿಂಗ್ ಅಯ್ಯಂಗಾರ್ ಅವರು ಬೆಂಗಳೂರು ಗಾಯನ ಸಮಾಜ ಬೆಳವಣಿಗೆಯಲ್ಲಿ ನಿಸ್ವಾರ್ಥಸೇವೆ ಸಲ್ಲಿಸಿರುವರಲ್ಲಿ ಒಬ್ಬರು. ಕಟ್ಟಡದ ನಿಧಿ ಸಂಗ್ರಹಣೆಯಲ್ಲಿ ಇವರ ಪಾತ್ರದೊಡ್ಡದು. ಅವರ ಪತ್ನಿ ಇಂದಿರಮ್ಮನವರು ಸಂಗೀತ ಪ್ರೇಮಿಗಳು, ಇವರಿಬ್ಬರ ಸ್ಮಾರಕವಾಗಿ ಅವರಿಗೆ ಪ್ರಿಯವಾಗಿದ್ದ ಬೆಂಗಳೂರು ಗಾಯನ ಸಮಾಜದಲ್ಲಿ ಅವರ ಕುಟುಂಬದವರು ದತ್ತಿ ಸ್ಥಾಪಿಸಿದ್ದಾರೆ.

---

### ವಿದ್ಯಾರಣ್ಯ ಪ್ರತಿಷ್ಠಾನ (ರಿ) ಬಸವೇಶ್ವರನಗರ, ಬೆಂಗಳೂರು–560 079

ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆಯು ಭಾರತೀಯ ಸಂಸ್ಕೃತಿ, ಭಾಷೆ, ಸಾಹಿತ್ಯ, ಸಂಗೀತ, ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದು ಈ ಕ್ಷೇತ್ರಗಳಲ್ಲಿ ನೈಪುಣ್ಯತೆಯನ್ನು ಗಳಿಸುತ್ತಿರುವ ನಾಡಿನ ಯುವಕರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತಿದೆ. ಇದರ ಜೊತೆಗೆ ಮಕ್ಕಳಲ್ಲಿ ಸಾಹಿತ್ಯ, ಕಲೆ, ಸಂಗೀತ, ಭಾರತೀಯ ಸಂಸ್ಕೃತಿಗಳನ್ನು ಉತ್ತೇಜಿಸುತ್ತಿರುವ ಸಂಸ್ಥೆಗಳೊಂದಿಗೆ ಕೈಜೋಡಿಸಿ ಪ್ರೋತ್ಸಾಹಿಸುತ್ತಿದೆ. ಅಶಕ್ತ ವೃದ್ಧರು, ವಿಶೇಷ ಚೇತನರು ಹಾಗೂ ಇಂಥವರ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸುತ್ತಿರುವ ಸಂಘ ಸಂಸ್ಥೆಗಳ ಜೊತೆಯೂ ತನ್ನನ್ನು ಗುರ್ತಿಸಿಕೊಂಡಿದೆ. ಈ ಸಂಸ್ಥೆಯ, ಸಂಸ್ಥಾಪಕ ಅಧ್ಯಕ್ಷರಾಗಿ ಶ್ರೀ ಎಂ.ವಿ. ಸತ್ಯನಾರಾಯಣರವರು ಕಾರ್ಯನಿರ್ವಹಿಸುತ್ತಿದ್ದಾರೆ.

# ಶ್ರೀಮತಿ ಬಿ.ವಿ. ಸೀತಾ: ಮರೆತು ಹೋದಕರ್ನಾಟಕ ಶಾಸ್ತ್ರೀಯ ಸಂಗೀತದಅಪರೂಪದ ಪ್ರತಿಭಾಗಣಿ



ಕರ್ನಾಟಕ ಶಾಸ್ತ್ರೀಯ ಸಂಗೀತ ಕುರಿತು ಹೀಗೆ ಆಲೋಚಿಸುತ್ತಿರುವಾಗ್ಗೆ ನನಗೆ ಹೊಳೆದದ್ದು ಎರಡು ರೀತಿಯ ಶೈಲಿ; ಒಂದು ಇದರ ಕಲಾಪ್ರಕಾರಗಳಲ್ಲಿ ಯಾವುದಾದರೂ ಒಂದು ಪ್ರಮುಖ ವಸ್ತುವಿನ ಎಳೆ ಹಿಡಿದುಅದನ್ನು ವಿಸ್ತೃತವಾದ ಪ್ರೌಢ ಲೇಖನ ಮತ್ತೊಂದು ಸಂಗೀತದಅನುಭವವನ್ನು ಒಳಗೊಂಡು, ಅದು ಪ್ರವಹಿಸುವ ಸೊಗಸಿನ ಸೌಂದರ್ಯವನ್ನು ವರ್ಣಿಸುವ ಸಣ್ಣ ಪ್ರಯತ್ನ ಎಂದು ತೋಚಿತು. ಆದರೆ ಸಂಗೀತವನ್ನೇತನ್ನ ಉಸಿರನ್ನಾಗಿಸಿ ಕೊಂಡು ಕಲಾರಾಧನೆಯನ್ನೇ ಸರ್ವಸ್ವವೆಂದು ತಿಳಿದು, ಸುರಕೋಗಿಲೆ ಯೊಂದುತನ್ನಿಷ್ಟಕ್ಕೆ–ತನ್ನಷ್ಟಕ್ಕೆ ತಾನೇ ತನ್ನದೇತಾದಾತ್ಮ್ಯ ಲಹರಿಯಲ್ಲಿ ತದೇಕವಾಗಿ ತಣಿಯುವಂತೆ ಹಾಡುವ, ಹಾಗೆ ಹಾಡುತ್ತಾದೈವೀ ಸಾಕ್ಷಾತ್ಕಾರವನ್ನು ಕಂಡವರು ವಿರಳಾತಿ ವಿರಳ. ಅವರಲ್ಲಿ ಅಪರೂಪದ ಪ್ರತಿಭೆ **ದಿ|| ಶ್ರೀಮತಿ ಬಿ.ವಿ. ಸೀತಾ** ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕದಲ್ಲಿ ವಿಭಿನ್ನವಾಗಿ ಮತ್ತು ವಿಶಿಷ್ಟವಾಗಿ ಗುರುತಿಸಿಕೊಳ್ಳುತ್ತಾರೆ.

ಶ್ರೀಮತಿ ಬಿ.ವಿ. ಸೀತಮ್ಮನವರು ಸಂಪ್ರದಾಯಸ್ಥ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದು ಬಂದವರು. ಶ್ರೀ ಬಿ.ಎಸ್. ವೆಂಕಟಾಚಾರ್ ಮತ್ತು ಶ್ರೀಮತಿ ಬಿ.ಎಸ್. ಯಶೋದಮ್ಮ ದಂಪತಿಗಳ ಮಗಳಾಗಿ 19ನೇ ಅಕ್ಟೋಬರ್ 1935ರಂದು ಜನಿಸಿದರು. ತಂದೆ ಶ್ರೀ ಬಿ.ಎಸ್. ವೆಂಕಟಾಚಾರ್ ಓರ್ವ ಬಹುಶ್ರುತ ವಿದ್ವಾಂಸರಾಗಿದ್ದು, ನೊಬೆಲ್ ಪ್ರಶಸ್ತಿ ಪುರಸ್ಕೃತ **ಪ್ರೊ. ಸಿ.ವಿ. ರಾಮನ್**ಅವರ ಆಪ್ತ ಕಾರ್ಯದರ್ಶಿಯಾಗಿ ನಾಲ್ಕು ದಶಕಗಳಿಗೂ ಮಿಗಿಲು ಸೇವೆ ಸಲ್ಲಿಸಿದ್ದರು. ಇದರೊಂದಿಗೆ **ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್** ಇದರ ಆಡಳಿತದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದವರು. ಶ್ರೀಯುತರಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅಪಾರವಾದ ಆಸ್ಥೆ, ಹಾಗಾಗಿ **ಮಲ್ಲೇಶ್ವರಂ ಸಂಗೀತ ಸಭಾ**ದ ಸಂಸ್ಥಾಪಕ ಸಮಿತಿಯ ಸದಸ್ಯರಾಗಿದ್ದರು. ಇವರ ಸುದೀರ್ಘ ಆಜೀವ ಸದಸ್ಯರಾಗಿ ಸೇವೆಗೈದಿರುವುದನ್ನು ಪರಿಗಣಿಸಿ 1997ರಲ್ಲಿ ನಡೆದ ಸಂಗೀತ ಸಭಾದ ಸುವರ್ಣ ಮಹೋತ್ಸವದಲ್ಲಿ ಸನ್ಮಾನಿಸಲಾಗಿತ್ತು.

ಶ್ರೀಮತಿ ಸೀತಮ್ಮನವರ ಪತಿ ಶ್ರೀ ಸಿ.ಎಸ್. ವರದರಾಜನ್ ಅವರು ಪತ್ನಿಯ ಸಂಗೀತ ಸಾಧನೆಗೆ ಸಹಕಾರ, ಸ್ಫೂರ್ತಿ ನೀಡುತ್ತಾ ಬೆನ್ನೆಲುಬಾಗಿ ನಿಂತವರು ಹಾಗೂ ಸೀತಮ್ಮನವರ ಎಲ್ಲಾ ಸಂಗೀತ ಕಚೇರಿಗಳಲ್ಲಿ ಜೊತೆಇದ್ದು ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು.

**'ಬೆಳೆಯುವ ಪೈರು ಮೊಳಕೆಯಲ್ಲೇ'** ಎಂಬ ನಾಣ್ನುಡಿಯಂತೆಚಿಕ್ಕ ವಯಸ್ಸಿನಲ್ಲೇಸೀ**ತಮ್ಮನವರು** ಸಂಗೀತ ಕಲೆಯ ಕಲಿಕೆಯಲ್ಲಿ ಅಭಿರುಚಿ, ಆಸಕ್ತಿಯನ್ನುತೋರಲು, ಅವರತಂದೆಆಕೆಯನ್ನುಶ್ರೀ **ಎಂ.ಎಸ್. ಗೋವಿಂದಸ್ವಾಮಿ** ಅವರ ಬಳಿ, ತರುವಾಯ **'ಸಂಗೀತ ವಿದ್ಯಾ ಸಾಗರ ಶ್ರೀ ಆರ್.ಆರ್. ಕೇಶವಮೂರ್ತಿ'** ಅವರ ಬಳಿ ಸಂಗೀತ ಕಲಿಕೆಗೆ ಸೇರಿಸುತ್ತಾರೆ. ಹೀಗೆ ಘಟಾನುಘಟಿಗಳ ಗರಡಿಯಲ್ಲಿ ಸಂಗೀತ ಕಲಿತ **ಶ್ರೀಮತಿ ಸೀತಮ್ಮ**ನವರು ಕಾಲಕ್ರಮೇಣ ಕರ್ನಾಟಕ ಸಂಗೀತ ಸಾರಸ್ವತ ಲೋಕದಲ್ಲಿ ಹೊಸ ಪ್ರತಿಭಾತಾರೆಯಾಗಿ ಬೆಳಗುತ್ತಾರೆ. **'ಅಭ್ಯಾಸಾನುಸಾರಿಣೀ ವಿದ್ಯಾ'** ಎಂಬಂತೆ ಕಲೆಯನ್ನು ವಿದ್ಯೆಯಾಗಿ ಕಲಿಯಬೇಕಾದ್ದು ನಿಜ, ಆದಾಗ್ಯೂ, ಸ್ವಯಂ ಪ್ರತಿಭೆ, ಕಲ್ಪನಾ ಸಾಮರ್ಥ್ಯ ಮತ್ತುಕರ್ತೃತ್ವ ಶಕ್ತಿ ಇದ್ದಲ್ಲಿ ಅದನ್ನು **'ಸಾಧನೆ'** ಎನ್ನುತ್ತಾರೆ. ಆನಂದವೇ ಮುಖ್ಯ ಉದ್ದೇಶವುಳ್ಳ ಕಾವ್ಯ,

ಚಿತ್ರಕಲೆಗಳು ಮತ್ತು ಸಂಗೀತವನ್ನು**'ಲಲಿತಕಲೆ'**ಎಂದು ಪರಿಗಣಿಸಿದ್ದು, ಇಲ್ಲಿ ವ್ಯಕ್ತಿಯ ಆಸಕ್ತಿಯಿಂದ ಜನ್ಯವಾಗುವ ಪ್ರತಿಭೆ ಮುಂದೆ ಕೌಶಲವಾಗಿ ಪ್ರಕಟಗೊಳ್ಳುತ್ತದೆ. ಯಾವುದೇ ಕಲೆಯು ಭಾವನಾತಿಷ್ಠವಾದಾಗ **'ಲಲಿತ ಕಲೆ'** ಎಂತಲೂ, ಪದಾರ್ಥತಿಷ್ಠವಾದಾಗ**'ಕುಶಲ ಕಲೆ'**ಎಂದೂಕರೆಯಲಾಗುತ್ತದೆ.ಆದರೆ**ಶ್ರೀಮತಿ ಸೀತನಮ್ಮ**ನವರಲ್ಲಿ ಶಾಸ್ತ್ರೀಯ ಸಂಗೀತವು ಭಾವನಾತಿಷ್ಠವಾಗಿಯೂ ಹಾಗೂ ಕುಶಲ ಕಲೆಯಾಗಿಯೂ ಅನಾವರಣಗೊಂಡಿತ್ತು ಎನ್ನಬಹುದು. ಒಂದು ಸಂದರ್ಭದಲ್ಲಿ **ಶ್ರೀಮತಿ ಸೀತಮ್ಮನವರ** ಕರ್ನಾಟಕ ಶಾಸ್ತ್ರೀಯ ಸಂಗೀತಗಾಯನ ಪ್ರಸ್ತುತಿಯ ಶೈಲಿ ಮತ್ತು ಓಘವನ್ನು ಕಂಡು ಶ್ರೀ ಟಿ. ಚೌಡಯ್ಯ ಮತ್ತು ಶ್ರೀ ದ್ವಾರಂ ವೆಂಕಟಸ್ವಾಮಿ ನಾಯ್ಡು ಇವರುಗಳು ಶ್ಲಾಘಿಸಿ ಆಶೀರ್ವದಿಸಿರುತ್ತಾರೆ. ಎಷ್ಟೆಲ್ಲ ಲೋಕ ಸಮ್ಮಾನಗಳು **ಸೀತಮ್ಮ**ನವರಿಗೆ ಸಂದರೂ, ಅವರು ಅದನ್ನು **ಶ್ರೀರಂಗನಾಥನ ಸಂಕಲ್ಪವೆಂದೇ ಪರಿಗಣಿಸುತ್ತಿದ್ದರು.**

**ಯಇಮಾ ವಿಶ್ವಾ ಭುವನಾನಿ ಜುಹ್ವದೃಷಿರ್ಹೋತಾ ನ್ಯಸೀದತ್ಪಿತಾ ನಃ ।**

**ಸ ಆಶಿಷಾ ದ್ರವಿಣಮಿಚ್ಛಮಾನಃ ಪ್ರಥಮಚ್ಛದವರಾನ್ ಆ ವಿವೇಶ ॥**

**ವಿಶ್ವಕರ್ಮಸೂಕ್ತ**

**ತಾತ್ಪರ್ಯ:** ಸರ್ವಜ್ಞನೂ ಸರ್ವಕಾರಕನೂ ಆದ ಪರಮಾತ್ಮನು ಸಮಸ್ತ ಲೋಕಗಳನ್ನು ಆಹುತಿ ರೂಪವಾಗಿ ಗ್ರಹಿಸುವವನೂ ಮತ್ತೆ ಇಚ್ಛಿಸಿದಾಗ ಅವುಗಳನ್ನು ಮತ್ತೆ ಸೃಷ್ಟಿಸುವವನೂ ಆಗಿದ್ದಾನೆಎಂದು ತಿಳಿಸುತ್ತದೆ.

**ಶ್ರೀಮತಿ ಸೀತಮ್ಮನವರು**ತಮ್ಮ ವೈಯಕ್ತಿಯ ಬದುಕಿನಲ್ಲಿದ್ದಂತೆ ಸಂಗೀತ ಸಾಧನೆಯಲ್ಲಿಯೂ ಸಂಪ್ರದಾಯ ನಿಷ್ಠೆಗೆ ಮತ್ತು ಶಾಸ್ತ್ರೀಯತೆಗೆ ಹೆಚ್ಚು ಒತ್ತುಕೊಟ್ಟವರು. 1972ರಲ್ಲಿ ಶ್ರೀಕೃಷ್ಣ ಸಂಗೀತ ಸಭಾ, ಬೆಂಗಳೂರು, ಇಲ್ಲಿ ನಡೆದ ಅವರ ಕಚೇರಿಯಲ್ಲಿ ಶ್ರೀ ಜಿ.ಹೆಚ್.ಆರ್. ಮೂರ್ತಿ, ಸಂಸ್ಥಾಪಕ ಕಾರ್ಯದರ್ಶಿ, ಈ ಅಂಶವನ್ನು ಗುರುತಿಸಿ ಮೆಚ್ಚುಗೆ ಸೂಚಿಸಿರುತ್ತಾರೆ.

**ಶ್ರೀಮತಿ ಬಿ.ವಿ. ಸೀತಾ** ಅವರು ಶ್ರೀ ತ್ಯಾಗರಾಜರ ಕರ್ನಾಟಕ ಸಂಗೀತದಲ್ಲಿಯೇ ವಿಶಿಷ್ಟ ರೂಪಕವಾದ **'ನೌಕಾ ಚರಿತ್ರಂ'** ಅನ್ನು ತಮ್ಮ ಅದ್ಭುತವಾದ ಕಂಠಸಿರಿ ಮಾತ್ರವಲ್ಲ ರಾಗಾಲಾಪ ಮತ್ತು ಸ್ವರ ಸಂಯೋಜನೆಗಳಿಂದ ಬಹು ಸುಂದರವಾಗಿ ಪ್ರಸ್ತುತಪಡಿಸುತ್ತಿದ್ದರು. **'ನೌಕಾ ಚರಿತ್ರಂ'** ಶ್ರೀ ತ್ಯಾಗರಾಜರ ಸುಂದರವಾದ ಕಲ್ಪನಾಕಾವ್ಯರೂಪಕದ ಜೊತೆಗೆ ಮನೋಹರವಾದ ಸಂಗೀತದ ಛಾಯೆಯಿಂದ ತುಂಬಿದೆ. ಇದರಲ್ಲಿ ಬಾಲ ಶ್ರೀಕೃಷ್ಣನ ಕುರಿತಂತೆ ಮುದ್ದಾದ ಚಿತ್ರಣ, ಯಮುನಾ ನದಿ, ಗೋಕುಲ, ಗೋಪ ಸ್ತ್ರೀಯರು ಧರಿಸುತ್ತಿದ್ದ ಉಡುಗೆ–ತೊಡುಗೆಗಳು, ಹಾಗೂ ಕಾವ್ಯದಲ್ಲಿ ಬರುವ ಸ್ಥಳಗಳ ಭೌಗೋಳಿಕ ವರ್ಣನೆ, ಜನಪದ ಸಮೂಹದ ಆಚಾರ–ಸಂಪ್ರದಾಯಗಳು, ಇವುಗಳನ್ನು ಸಮಕಾಲೀನ ಚಿತ್ರಣದೊಂದಿಗೆ ಶ್ರೀ ತ್ಯಾಗರಾಜರು ಮನೋಜ್ಞವಾಗಿ ಬಿಂಬಿಸಿದ್ದಾರೆ. **'ನೌಕಾ ಚರಿತ್ರಂ'** ಒಟ್ಟು21 ಕೀರ್ತನ ಶೈಲಿಯ ರೂಪಕ ಪದ್ಯಗಳನ್ನು ಒಳಗೊಂಡಿದ್ದು, 24 ಕಂದ ಪದ್ಯಗಳು, 5 ಸೀಸ ಪದ್ಯಗಳು, 3 ಉತ್ಪಲಮಾಲಗಳು, 5 ಚಂಪಕ ಮಾಲಗಳು, 7 ಶಾರ್ದೂಲಗಳು, 2 ದ್ವಿಪದಗಳು, 1 ಉತ್ಸಾಹ ಪದ್ಯ ಮತ್ತು ಹಲವಾರು ಆಸಕ್ತಿದಾಯದ ಅಂಶಗಳು ಗದ್ಯರೂಪದಲ್ಲಿ ಮೂಲ ಕಥೆಗೆ ಸಂಪರ್ಕಿಸುವ ಕೊಂಡಿಯಾಗಿ ಬೆಳೆದಿದೆ. ಇದರಲ್ಲಿರುವ 21 ಹಾಡು ಗಬ್ಬದರೂಪಕದಲ್ಲಿ 7 ಕೃತಿ ಶೈಲಿಯಲ್ಲಿದ್ದು, ಉಳಿದವುಗಳು ಸುಶ್ರಾವ್ಯವಾಗಿ ಹಲವು ಸಂದರ್ಭಗಳನ್ನು ಸರಳವಾಗಿ ನಿರೂಪಿಸುತ್ತಾ ಸಾಗುತ್ತದೆ.

**ಶ್ರೀಮತಿ ಬಿ.ವಿ. ಸೀತಮ್ಮನವರ** ಸಂಗೀತಗಾಯನ ಪ್ರಸ್ತುತಿಯಲ್ಲಿ ಕಂಡು ಬರುತ್ತಿದ್ದ ವಿಶೇಷವೆಂದರೆ ಅವರ ಗಾಯನ ಭಾವನೆಗಳ ವಾಹಕವಾಗಿ, ಅರ್ಥಾಭಿವ್ಯಕ್ತಿಯ ದೃಷ್ಟಿಯಲ್ಲಿ ನಾದವು ಕೇಳುಗರಲ್ಲಿ ಪೂರ್ಣವಾಗಿ ಲೀನವಾಗುವಷ್ಟು ಸಶಕ್ತವಾಗಿತ್ತು. ಆದಕಾರಣ **ಶ್ರೀಮತಿ ಸೀತಮ್ಮನವರ** ಗಾಯನವು ಸಂಪ್ರದಾಯದ ದೃಷ್ಟಿಯಿಂದ ಶುದ್ಧ ಶ್ರವ್ಯವಾಗಿ ರಸದೃಷ್ಟಿಯಿಂದ ಐಂದ್ರಿಯಿಕರಂಜನೆ ಹಾಗೂ ಆಮೂರ್ತವಾದ ಬೌದ್ಧಿಕ ಸ್ತರಗಳಲ್ಲಿ

ವ್ಯಾಪಿಸಿರುವುದನ್ನು ಗಮನಿಸಬಹುದು.ಪ್ರಬಲವಾದ ಭಾವ ಪ್ರಭಾವವನ್ನು ತಮ್ಮ ಸಂಗೀತ ಸುಧೆಯಲ್ಲಿ ಹೊಮ್ಮಿಸುತ್ತಿದ್ದ **ಶ್ರೀಮತಿ ಸೀತಮ್ಮನವರು**ಸಂಗೀತ ಶ್ರಾವಕರು ರಸಾಸ್ವಾದನೆಯಲ್ಲಿ ಲಿಪ್ತಗೊಳಿಸುವಷ್ಟು ಸಮ್ಮೋಹಕವಾಗಿ ಸಂಗೀತ ಪ್ರವಾಹದಲ್ಲಿ ಲೀನವಾಗುವಂತೆಇದ್ದಿತು.

ಎಷ್ಟೇ ದೇಹ ಬಳಲಿಕೆಯ ದೂರದೂರಿಗೆ ಸುದೀರ್ಘ ಪ್ರಯಾಣವಿದ್ದಾಗ್ಯೂ, ಕುಡಿಯುವ ನೀರನ್ನೂ ಸಹ ಒಯ್ಯುತ್ತಿದ್ದರು. ತುಂಬಾಜನಾನುರಾಗಿಯಾಗಿದ್ದ ಇವರುಅತಿಥಿ ಸತ್ಕಾರ, ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು, ಇವರ ಹುಟ್ಟುಗುಣ. ಪ್ರಸಿದ್ಧಿಗಾಗಿ ಹಪಾಹಪಿ, ಅಹಮಿನ ಭಾವ ಇದ್ದಲ್ಲಿ ಜ್ಞಾನದ ಒಳಹರಿವು ಕ್ಷೀಣಿಸುತ್ತದೆ, ಆದರೆ ಯಾವುದೇ ಅಂತಹ ದೋಷಗಳಿಲ್ಲದ, ನಿಃಸ್ವಾರ್ಥವುಳ್ಳ ಅಮೃತ ಕಲಶದಂತಹ ಹೃದಯದಲ್ಲಿ ಎಲ್ಲಾ ಸತ್ವಗಳು ಪ್ರವೇಶಿಸಿದಾಗ ಸಾರ್ಥಕ ಬದುಕು ಸಾಧ್ಯ. ಸಂಗೀತಜ್ಞಾನ ಗಂಗೆ ಅವರ ನಾಡಿ–ಧಮನಿಗಳಲ್ಲಿ ವಿಶಾಲವಾಗಿ ತುಂಬಿಕೊಂಡು ಸುಪ್ತ ಪ್ರಭೆಯ ಗಾಮಿನಿಯಾಗಿ ಹರಿಯುತ್ತಿತ್ತು.

**ಶ್ರೀಮತಿ ಸೀತಮ್ಮನವರ** ಶುದ್ಧ ಪ್ರಕಾರದ ಶಾಸ್ತ್ರೀಯ ಸಂಗೀತವು ಕೇಳುಗರಲ್ಲಿ ಆಧ್ಯಾತ್ಮಿಕದ ಅನುಭೂತಿಯನ್ನುಂಟು ಮಾಡುತ್ತಿತ್ತು. ವೈಯಕ್ತಿಕವಾಗಿ ಎಷ್ಟೇ ಕಷ್ಟ–ಕಾರ್ಪಣ್ಯಗಳು ಹಾಗೂ ದೇಹವನ್ನು ಬಾಧಿಸುತ್ತಿದ್ದ ಪ್ರಾರಬ್ಧ ಕಾಯಿಲೆಗಳ ನಡುವೆ ಅವರು ಸದಾ ಹಸನ್ಮುಖಿಯಾಗಿ, ಬದುಕಿನ ಊರ್ಧ್ವಗಾಮಿತ್ವದ ಆಶಾವಾದಿಯಾಗಿ ಕಂಗೊಳಿಸುತ್ತಿದ್ದರು, ಇವಕ್ಕೆಲ್ಲಅವರ ಸಂಗೀತದ ಮೂಲಕ ಭಗವಂತನ ಸಾನ್ನಿಧ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದು ಎನ್ನಬಹುದು.

ಕೃತಿಗಳನ್ನು ಸಾಂಪ್ರದಾಯಿಕವಾಗಿ ಹಾಗೂ ಶುದ್ಧ ಶಾಸ್ತ್ರೀಯವಾಗಿ ರಾಗಗಳೊಂದಿಗೆ ಸುಸಂಬದ್ಧವಾಗಿ ಪ್ರಸ್ತುತಪಡಿಸುತ್ತಿದ್ದ **ಶ್ರೀಮತಿ ಸೀತಮ್ಮ**ನವರು, ದೇವರ ನಾಮಗಳು, ಉಗಾಭೋಗಗಳು, ವಿರುತ್ತಂಗಳಿಗೆ, ವಚನ ಮತ್ತು ಶ್ಲೋಕಗಳಿಗೆ ಜೀವ ಕಳೆ ತುಂಬಿ ಅಮೋಘವಾಗಿ ಸಂಗೀತ ರಸಿಕರ ಹೃನ್ಮನಗಳನ್ನು ಮಿಡಿಯುವಂತೆ ಹಾಡುವುದರಲ್ಲಿ ನೈಪುಣ್ಯತೆ ಇತ್ತು. ಇದಲ್ಲದೆ ಹಲವಾರು ಪ್ರಖ್ಯಾತ ವೇದಿಕೆಗಳಲ್ಲಿ ಸಂಗೀತವನ್ನು **ಶ್ರೀಮತಿ ಸೀತಮ್ಮನವರು** ಪ್ರಸ್ತುತಪಡಿಸಿದ್ದಾರೆ. ಅವುಗಳಲ್ಲಿ ತಿರುವನಂತಪುರಂ ಆಕಾಶವಾಣಿಯಲ್ಲಿ ತಯಾರಾದ ಶ್ರೀ ತ್ಯಾಗರಾಜರ ನೌಕಾ ಚರಿತಂ. ಇದು 1964ರಲ್ಲಿ ರಾಷ್ಟ್ರೀಯ ಸಂಗೀತಕಾರ್ಯಕ್ರಮದಲ್ಲಿ ಪ್ರಸಾರವಾಗಿತ್ತು. 1970ರಲ್ಲಿ ಕರ್ನಾಟಕ ಗಾನಕಲಾ ಪರಿಷತ್ ಸ್ಥಾಪನೆಯಾದ ಸಂದರ್ಭದಲ್ಲಿ ಅದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸೀತಮ್ಮನವರದೇ ಸಂಗೀತ ಕಚೇರಿ. 1977ರಲ್ಲಿ ಚೆನ್ನೈನ ಫೈನ್‌ಆರ್ಟ್ಸ್ ಸೊಸೈಟಿಯಲ್ಲಿ ಸೀತಮ್ಮನವರ ಗಾಯನವನ್ನು ಆಲಿಸಿದ ಅಂದಿನ ಖ್ಯಾತ ಸಂಗೀತ ವಿಮರ್ಶಕರಾದ ಶ್ರೀ ಸುಬ್ಬುರವರು ತುಂಬು ಮನಸ್ಸಿನಿಂದ **ಸೀತಮ್ಮನವರ** ಗಾಯನವನ್ನು, ಕೃತಿ–ರಾಗ ಪ್ರಸ್ತುತಿಯಲ್ಲಿ ಇದ್ದ ಶುದ್ಧತೆಯನ್ನು ಶ್ಲಾಘಿಸಿದ್ದು, ಅಂತೆಯೇ ಮೇ 1978ರಲ್ಲಿ ಆಲ್ ಇಂಡಿಯಾ ರೇಡಿಯೋ ಇದರ ದಕ್ಷಿಣ ವಲಯದ ಹುಕ್ ಅಪ್ ಕಚೇರಿಯಲ್ಲಿ **ಸೀತಮ್ಮನವರು** ಪ್ರಸ್ತುತಪಡಿಸಿದ ಭವಪ್ರಿಯರಾಗವು ಅತ್ಯುತ್ತಮ ಮಾದರಿಯಾಗಿ ಮೂಡಿ ಬಂದಿದ್ದು, ಹೀಗೆ ಹತ್ತು ಹಲವು ಪ್ರಸಂಗಗಳು ಸಂಭವಿಸಿದೆ.

ಇದು ಸುಮಾರು 1976–77 ಅಥವಾ 1978 ಇರಬಹುದು, ಏಕವ್ಯಕ್ತಿ ವಯೋಲಿನ್ ವಾದನ ಕಾರ್ಯಕ್ರಮ ನೀಡಲು ಆಕಾಶವಾಣಿಗೆ ಹೋದಾಗಲೆಲ್ಲಾ, ಕಿರಿಯ ವಿದ್ಯಾರ್ಥಿ ಕಲಾವಿದನಾಗಿದ್ದ ನನ್ನಲ್ಲಿ ಶ್ರೀಮತಿ ಸೀತಮ್ಮನವರು ಧೈರ್ಯ, ಆತ್ಮ ವಿಶ್ವಾಸಗಳನ್ನು ತುಂಬಿದಲ್ಲದೆ, ಪಿಟೀಲು ನುಡಿಸುವ ಸಂದರ್ಭದಲ್ಲಿ ಆಗುತ್ತಿದ್ದ ತಪ್ಪನ್ನು ತಿದ್ದುತ್ತಿದ್ದರು. ಎಂದಿಗೂ ಮುನಿಸಿಕೊಳ್ಳದ, ಕಿರಿಯಕಲಾವಿದರ ದೋಷಗಳನ್ನು ಎತ್ತಿ ಆಡದ ಹಾಗೂ ಕಿರಿಯರನ್ನು ಗೌರವದಿಂದ ಕಾಣುವ ಅಂತಃಕರಣ ಪೂರ್ವಕವಾದ ಸುಸಂಸ್ಕೃತ ಸಂಸ್ಕಾರ ಅವರಲ್ಲಿ ತುಳುಕುತ್ತಿತ್ತು. ಇವರ ಸಂಗೀತ ಗುರುಗಳಾದ ಶ್ರೀ ಆರ್.ಆರ್. ಕೇಶವಮೂರ್ತಿ ಅವರ ಕಟ್ಟಕಡೆಯ ತಂಡದ ಶಿಷ್ಯನಾಗಿ ನಾನೂ ಸಹ ಸಂಗೀತಾಭ್ಯಾಸ ಮಾಡುವ ಸೌಭಾಗ್ಯ ನನ್ನದಾಗಿತ್ತು.

ನನ್ನನ್ನುಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದ **ಸೀತಮ್ಮ**ನವರು ನನಗೆ ತಾಳಗಳನ್ನು ಹೇಳಿಕೊಟ್ಟಿದ್ದರು. ಸಂದರ್ಭ ಹೇಗೆ ಒದಗಿ ಬಂತೆಂದರೆ, ಅಂದುಗ್ರಹಣದ ದಿನ, ಪ್ರಾಯಶಃ 1981–82 ಇರಬಹುದು, ಜಯನಗರದ ಅವರ ನಿವಾಸಕ್ಕೆ ಹೋಗಿದ್ದಾಗ, **ಸೀತಮ್ಮ**ನವರಿಗೆ ಅದಾಗಲೇ ಅನಾರೋಗ್ಯಕ್ಕೆ ತುತ್ತಾಗಿ, ಕೈಗಳೆಲ್ಲಾ ಬಾತುಕೊಂಡಿದ್ದಾಗ, ಅವರು ಶ್ರೀ ತ್ಯಾಗರಾಜರಕೃತಿ **'ದಾಸುಕೊವೆಲನ'** ಎಂಬ ಕೀರ್ತನೆಯನ್ನು ಮಿಶ್ರಝಂಪೆ ತಾಳದಲ್ಲಿ ರಾಗ–ಸ್ವರ ಹಾಡಿ ಹೇಳಿಕೊಟ್ಟಿದ್ದರು.

ಇದು 1978–79ರ ಆಸುಪಾಸು ಇರಬಹುದು, ಶ್ರೀಮತಿ ಡಿ.ಕೆ. ಪಟ್ಟಮ್ಮಾಳ್ ಇವರು ಮಾಡ್ರನ್ ಹಿಂದೂ ಹೋಟೆಲ್ ಉಳಿದುಕೊಂಡಿದ್ದ ಸಂದರ್ಭದಲ್ಲಿ, ಆಗ ಮಧ್ಯಾಹ್ನ 1.30ರಿಂದ 2.00ರವರೆಗೆ ಆಲ್ ಇಂಡಿಯಾ ರೇಡಿಯೋದ ನೇರ ಬಾನುಲಿ ಕಾರ್ಯಕ್ರಮದಲ್ಲಿ ಸೀತಮ್ಮನವರ ಗಾಯನವು ಪ್ರಸಾರವಾಗುತ್ತಿದ್ದು, ಶ್ರೀ ಮುತ್ತುಸ್ವಾಮಿ ದೀಕ್ಷಿತರಕೀರ್ತನೆಯಾದ**'ರಂಗನಾಯಕಂ'**, ನಾಯಕಿರಾಗದಲ್ಲಿ ಹಾಡುತ್ತಿದ್ದಾಗ, ಅದನ್ನು ಆಲಿಸಿದ ಶ್ರೀಮತಿ ಡಿ.ಕೆ. ಪಟ್ಟಮ್ಮಾಳ್ ಅವರು ಸೀತಮ್ಮನವರ ಗಾಯನವನ್ನು ಆಲಿಸಿ ತುಂಬು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ಮತ್ತೊಂದು ಘಟನೆ 1980ರಲ್ಲಿ ಇರಬಹುದು, ಸೀತಮ್ಮನವರು ಕ್ಯಾನ್ಸರ್‌ಗೆ ಚಿಕಿತ್ಸೆಗೆಂದು ಮದ್ರಾಸಿನಲ್ಲಿ ಉಳಿದು ಕೊಂಡಿದ್ದಾಗ ಅಲ್ಲಿಯೇ ಕೃಷ್ಣ ಗಾನ ಸಭಾದಲ್ಲಿ ಸಂಗೀತ ಗಾಯನ ಕಚೇರಿಯನ್ನು ನೀಡಿದ ಸಂದರ್ಭದಲ್ಲಿ ಕಚೇರಿಯಲ್ಲಿ ಉಪಸ್ಥಿತರಿದ್ದ ಶ್ರೀ ಲಾಲ್‌ಗುಡಿಜಯರಾಮನ್ ಅವರು ಸೀತಮ್ಮನವರ ಗಾಯನವನ್ನು ಬಹುವಾಗಿ ಮೆಚ್ಚಿಕೊಂಡ ಪ್ರಸಂಗ, ಘಟಾನುಘಟಿಗಳು ಇವರ ಸಂಗೀತ ಪ್ರೌಢಿಮೆಯನ್ನು ಮೆಚ್ಚಿಕೊಂಡಿರುವುದಕ್ಕೆ ಮತ್ತೊಂದು ಉದಾಹರಣೆ.

ಮಧ್ಯ ವಯಸ್ಸಿಗೆ ಕ್ಯಾನ್ಸರ್‌ಗೆತುತ್ತಾದ **ಶ್ರೀಮತಿ ಸೀತಮ್ಮ** ಅವರು ಬದುಕಿದ್ದುದು ಕೇವಲ 49 ವಸಂತಗಳು ಮಾತ್ರ ಆದರೆ ಅವರು ಇದ್ದಷ್ಟು ಕಾಲ ಯಾವಕಲಾವಿದನಿಗೂ ದೊರಕದ ಅಪೂರ್ವ ಸಮಯದಂತೆ ತಮ್ಮ ಆಯುವನ್ನು ಸಂಗೀತದ ಸಾಧನಾತಪಕ್ಕೆ ಮೀಸಲಿರಿಸಿದರು.ದೇಹತನ್ನೆಲ್ಲ ಶಕ್ತಿ–ಸಾಮರ್ಥ್ಯಗಳನ್ನು ಕಳೆದುಕೊಂಡು ನಿಷ್ಕ್ರಿಯವಾಗಿ ಮರಣಶಯ್ಯೆಯಲ್ಲಿದ್ದಾಗ್ಯೂ ಸಹ ತುರೀಯಾವಸ್ಥೆಯಲ್ಲಿ ಶ್ರೀರಂಗನಾಥನನ್ನೇ ಸದಾ ಸ್ಮರಿಸಿ, ಧ್ಯಾನಿಸುತ್ತಾ ಇದ್ದ ಸೀತಮ್ಮನವರು, ಮಂದ್ರಸ್ಥಾಯಿಯಲ್ಲಿ ತೆಳು ದನಿಯಲ್ಲಿ ಶ್ರೀರಂಗನ ಈ ಶ್ಲೋಕವನ್ನು ಜಪಿಸುತ್ತಿದ್ದುದು ಒಂದು ವಿಸ್ಮಯಕಾರಿ ಘಟನೆ ಎನ್ನಬಹುದು.

**ಸಪ್ತಪ್ರಾಕಾರಮಧ್ಯೆ ಸರಸಿಜಮುಕುಳೋದ್ಭಾಸಮಾನೆ ವಿಮಾನೇ**

**ಕಾವೇರೀಮಧ್ಯದೇಶೇ ಮೃದುತರಫಣಿರಾಡ್ಭೋಗಪರ್ಯಂಕಭಾಗೇ ।**

**ನಿದ್ರಾಮುದ್ರಾಭಿರಾಮಂ ಕಟಿನಿಕಟಶಿರಃಪಾರ್ಶ್ವವಿನ್ಯಸ್ತಹಸ್ತಂ**

**ಪದ್ಮಾಧಾತ್ರೀಕರಾಭ್ಯಾಂ ಪರಿಚಿತಚರಣಂರಂಗರಾಜಂ ಭಜೇ ॥**

7ನೇ ಫೆಬ್ರವರಿ 1984ರಂದು ಸುದೀರ್ಘವಾಗಿ ಕ್ಯಾನ್ಸರ್‌ನೊಂದಿಗೆ ಹೋರಾಟ ಮಾಡಿದ ಅವರ ಶರೀರತನ್ನ ಶಾರೀರವನ್ನು ಮತ್ತು ಬದುಕಿನ ಗಾಯನವನ್ನೇ ನಿಲ್ಲಿಸುವಂತಾಯಿತು. **ಸೀತಮ್ಮನ** ಆಯಸ್ಸು ಅರ್ಧ ಶತಕದಗಡಿಯನ್ನೂ ಮುಟ್ಟಲಿಲ್ಲ, ಆದರೆ ಅವರ ಸಂಗೀತಕ್ಕೆ ಸಹಸ್ರಮಾನವಾದರೂ ಅಳಿವಿಲ್ಲ. ಸಾವಿರಾರು ಅಭಿಮಾನಿಗಳನ್ನು ಹೊಂದಿದ್ದ ಮತ್ತು ನೂರಾರು ಶಿಷ್ಯರನ್ನು ಸೃಷ್ಟಿಸಿದ ಇಂತಹ ಅಪೂರ್ವವಾದ ಸಂಗೀತ ಪ್ರತಿಭೆಯ ಗಣಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕವು ಎಂದೆಂದಿಗೂ ಚಿರಋಣಿ ಯಾಗಿರುತ್ತದೆ ಹಾಗೂ ಮಾತೃಸ್ವರೂಪಿಯಾದ ಆ ಮಹಾಚೇತನಕ್ಕೆ ನನ್ನ ನುಡಿ ನಮನ.

**ಡಾ॥ ಎಸ್.ಸಿ. ಶರ್ಮ**

**ಶಿಕ್ಷಣತಜ್ಞರು, ಸಂಗೀತಜ್ಞರು ಹಾಗೂ ಸಂಸ್ಕೃತಿಚಿಂತಕರು**

# ಯುವ ಸಂಗೀತೋತ್ಸವ-2025



























RNI Regn no KARBIL/ 2008/24407, Posted at Bangalore PSO 560026,
**Posted on 07th JULY-2025 Periodical Rate Date of Published 4-07-2025**

## ಯುವ ಕಲಾರತ್ನ ಪ್ರಶಸ್ತಿ ವಿಜೇತರು



**Best Upa-Pakka Vaadya - Ghatam : Shamith S Gowda**



**Best Violinist : Govinda Madhav**



**Best Mrudangist : Prajwal Bharadwadj**



**Best Vocalist : Pragna Adiga**



**Best Instrumentalist - Flute: Achuth M Athreya**

TO/

**Bangalore Gayana Samaja,**
Sri Krishnarajendra Road,
Bangalore- 560004 Ph: 2650 6049. .

**Published & Edited by Dr. M.R.V. Prasad for the Bangalore Gayana Samaja, Sri Krishnarajendra Road, Bangalore- 560004 Ph: 2650 6049. . e-mail: info@gayanasamaja.org. Website : www.gayanasamaja.org.**
**Printed at: Parimala Mudranalaya, 2/1, 3rd Cross, Mysore Road, Bangalore- 560 026**